# ಸೂಜಿ-ದಾರ

ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಸಂಗಾತಿ....

ಸಂಪುಟ : 1 ಸಂಚಿಕೆ : 2 ಪುಟ : 8 ಖಾಸಗಿ ಪ್ರಸಾರಕ್ಕಾಗಿ ಅಕ್ಟೋಬರ್ 2005


## ಸಂಪಾದನೆ...

ಆತ್ಮೀಯ ಕಾರ್ಮಿಕರೇ,

ಎಲ್ಲರಿಗೂ ದಸರಾ-ದೀಪಾವಳಿ ಹಬ್ಬದ ಶುಭಾಶಯಗಳನ್ನು ಹೇಳುತ್ತಾ, ಸೂಜಿದಾರ ವಾರ್ತಾಪತ್ರದ ಎರಡನೇ ಸಂಚಿಕೆಯನ್ನು ತಮ್ಮ ಕೈಗಿಡಲು ಹರ್ಷಿಸುತ್ತೇವೆ. ಸೂಜಿದಾರ ಪತ್ರಿಕೆಯ ಮೊದಲ ಸಂಚಿಕೆಯ ಬಿಡುಗಡೆ ಸಮಾರಂಭವನ್ನು ದಿನಾಂಕ 25-8-05 ಅಮೆರಿಕಾದ J.W.J ಸಂಸ್ಥೆಯ ಅನನ್ಯ ಹಾಗೂ ಅಹಮದಾಬಾದ್‌ನ ಮಿಲ್ ಮಜದೂರ್ ಸಭಾದ ಅಶೀವ್‌ರಾಯ್, ಎನ್.ಟಿ.ಯು.ಐನ ಮೋಹನ್ ಮಣಿ ಹಾಗೂ ನೂರಾರು ಗಾರ್ಮೆಂಟ್ಸ್ ಕಾರ್ಮಿಕರ ಸಮ್ಮುಖದಲ್ಲಿ ಸರಳವಾಗಿ ನೆರವೇರಿಸಲಾಯಿತು.



ಸ್ನೇಹಿತರೇ,

ಅಮೆರಿಕಾ ಮತ್ತು ಯುರೋಪ್‌ನಂತಹ ಮುಂದುವರೆದ ರಾಷ್ಟ್ರಗಳಲ್ಲಿ ನೆಲೆಯೂರಿದ್ದ ಗಾರ್ಮೆಂಟ್ಸ್ ಉದ್ಯಮವು 70ರ ದಶಕದಲ್ಲಿ, ಕಚ್ಚಾವಸ್ತುಗಳು ಹಾಗೂ ಮಾನವ ಸಂಪನ್ಮೂಲಗಳು ಹೇರಳವಾಗಿ ಹಾಗೂ ಕಡಿಮೆ ವೆಚ್ಚದಲ್ಲಿ ದೊರೆಯುತ್ತಿದ್ದ ದಕ್ಷಿಣ ಏಷ್ಯಾದ ಮುಂದುವರೆಯುತ್ತಿರುವ ರಾಷ್ಟ್ರಗಳಿಗೆ ವಲಸೆ ಹೋಗಲಾರಂಭಿಸಿದವು. ಉದ್ಯಮಗಳು ವಲಸೆ ಬರಲಾರಂಭಿಸಿದ ಮೇಲೆ ಈ ದೇಶಗಳಲ್ಲಿ ಉದ್ಯೋಗಾವಕಾಶಗಳು ಹೆಚ್ಚಾಗಿ, ವಿದೇಶಿ ವಿನಿಮಯ ದಿಂದ ರಾಷ್ಟ್ರೀಯ ಆದಾಯವು ಹೆಚ್ಚಾಗಲು ಪ್ರಾರಂಭವಾಯಿತು.

ಅಂತರರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧೆಯನ್ನು ಎದುರಿಸಬೇಕಾದಂತಹ ಈ ಉದ್ಯಮದ, ಉತ್ಪಾದನೆಯ ಪ್ರಕ್ರಿಯೆಯಲ್ಲಿ ಬೇರೆಲ್ಲೂ ಚೌಕಾಸಿ ಮಾಡಲಾಗದಂತಹ ಮಾಲೀಕರು ಅಂತಿಮವಾಗಿ ಕಾರ್ಮಿಕರನ್ನು ಹಲವಾರು ರೀತಿಯಲ್ಲಿ ಶೋಷಿಸುತ್ತಿದ್ದಾರೆ. ಅದರಲ್ಲಿ ಕನಿಷ್ಠ ವೇತನ ಕೊಡದಿರುವುದೂ ಒಂದು. ಸರ್ಕಾರಗಳು, ಕಾರ್ಮಿಕರ ಉತ್ತಮ ಜೀವನಕ್ಕೆ ಬೇಕಾದ, ಜೀವನ ನಿರ್ವಹಣಾ ವೇತನವನ್ನು ಜಾರಿಗೆ ತರುವುದಿರಲಿ, ಅನುಷ್ಠಾನದಲ್ಲಿರುವ ಕನಿಷ್ಠ ವೇತನದ ಕಾನೂನನ್ನೇ ಪರಿಣಾಮಕಾರಿಯಾಗಿ ಜಾರಿಗೆ ತಂದಿಲ್ಲ. ಇದರಿಂದ ದಕ್ಷಿಣ ಏಷ್ಯಾ ರಾಷ್ಟ್ರಗಳಲ್ಲಿನ ಗಾರ್ಮೆಂಟ್ಸ್ ಉದ್ಯಮದ ಕಾರ್ಮಿಕರು ಉತ್ತಮ ಜೀವನದಿಂದ ವಂಚಿತರಾಗಿದ್ದಾರೆ.

ಐರೋಪ್ಯ ರಾಷ್ಟ್ರಗಳು ಮತ್ತು ಅಮೆರಿಕಾ ಸಂಯುಕ್ತ ಸಂಸ್ಥಾನಗಳು ಆಮದು ಮಾಡಿಕೊಳ್ಳುತ್ತಿರುವ ಸಿದ್ಧ ಉಡುಪುಗಳಲ್ಲಿ ಹೆಚ್ಚಿನ ಭಾಗ ದಕ್ಷಿಣ ಏಷ್ಯಾ ರಾಷ್ಟ್ರಗಳು ತಯಾರಿಸುತ್ತಿವೆ. ಬೆಲೆಯನ್ನು ನಿಗದಿಪಡಿಸುವಲ್ಲಿ ಹೆಚ್ಚಿನ ಪಾತ್ರವನ್ನು ಈ ರಾಷ್ಟ್ರಗಳಲ್ಲಿನ ಕೊಳ್ಳುವ ಸಂಸ್ಥೆಗಳು ನಿರ್ಣಯಿಸುತ್ತವೆ. ಇಂತಹ ಪರಿಸ್ಥಿತಿಯಲ್ಲಿ, ಒಂದು ದೇಶದ ಕಾರ್ಮಿಕರು ಸಂಘಟಿತರಾಗುವುದಕ್ಕಿಂತ ದಕ್ಷಿಣ ಏಷ್ಯಾದ ಗಾರ್ಮೆಂಟ್ಸ್ ಕಾರ್ಮಿಕರೆಲ್ಲ ಒಟ್ಟಾಗಿ ಸಂಘಟಿತರಾದಲ್ಲಿ, ಜೀವನ ನಿರ್ವಹಣಾ ವೇತನದ ಜೊತೆಗೆ ಇತರ ಸವಲತ್ತುಗಳನ್ನೂ ಪಡೆದುಕೊಳ್ಳ ಬಹುದು. ಗ್ರಾಹಕರಿಗೆ ಇದರಿಂದ ಹೆಚ್ಚಿನ ಹೊರೆ ಬೀಳದೆ, ತಾನು ಕೊಳ್ಳುವ ಪ್ರತಿ ಉಡುಪಿಗೆ 1 ಡಾಲರ್ ಹೆಚ್ಚು ಪಾವತಿಸಿದರೆ, ಕಾರ್ಮಿಕರು ತಿಂಗಳಿಗೆ 500 ರೂ.ನಷ್ಟು ಹೆಚ್ಚು ವೇತನ ಪಡೆದುಕೊಳ್ಳಬಹುದೆಂದು ವಿಶ್ಲೇಷಣಾಕಾರರ ಅಭಿಪ್ರಾಯವಾಗಿದೆ.

ದಕ್ಷಿಣ ಏಷ್ಯಾದ ವಿವಿಧ ರಾಷ್ಟ್ರಗಳಲ್ಲಿನ ಕಾರ್ಮಿಕರೆಲ್ಲರ ಜೀವನ ನಿರ್ವಹಣಾ ವೆಚ್ಚ ಹೆಚ್ಚು ಕಡಿಮೆ, ಒಂದೇ ರೀತಿ ಆಗಿದ್ದರೂ, ಸದ್ಯಕ್ಕೆ ಜಾರಿಯಲ್ಲಿರುವ ಕನಿಷ್ಠ ವೇತನ ಬೇರೆ ಬೇರೆಯಾಗಿದೆ.

(5ನೇ ಪುಟ ನೋಡಿ)



**ಸಾಧನೆ**

# ಸಂಘಟನೆಯ ಸವಾಲುಗಳನ್ನು ಮೀರಿ ಬೆಳೆದ ಗಾರ್ಮೆಂಟ್ಸ್ ಕಾರ್ಮಿಕ ಸಂಘ

**ಬೆಂ**ಗಳೂರಿನಲ್ಲಿ 70ರ ದಶಕದಲ್ಲಿ ಗಾರ್ಮೆಂಟ್ಸ್ ಕಾರ್ಖಾನೆಗಳು ಪ್ರಾರಂಭವಾದರೂ ಹೆಚ್ಚಾಗಿ ಕಾರ್ಮಿಕರು ಅಸಂಘಟಿತರಾಗಿಯೇ ಉಳಿದುಕೊಂಡಿದ್ದಾರೆ. ಕೆಲವು ಕಾರ್ಖಾನೆಗಳ ಕಾರ್ಮಿಕರು ಕಾರ್ಮಿಕ ಸಂಘಗಳನ್ನು ರಚಿಸಿಕೊಂಡು ಸಂಘಟಿತರಾಗಿದ್ದರೂ, ಹಲವಾರು ಕಾರಣ ಗಳಿಂದ ಕಾರ್ಖಾನೆಗಳು ಮುಚ್ಚಿ ಹೋದವು. ಅನಿಷ್ಟಕ್ಕೆಲ್ಲಾ ಶನೀಶ್ವರನೇ ಗುರಿ ಎಂಬಂತೆ ಕಾರ್ಖಾನೆಗಳು ಆಂತರಿಕ ತೊಂದರೆಗಳಿಂದ ಮುಚ್ಚಿದರೂ ಕಾರ್ಮಿಕ ಸಂಘಗಳೇ ಇದಕ್ಕೆ ಕಾರಣ ಎಂಬ ಹಣೆಪಟ್ಟಿ ಹಚ್ಚಲಾಯಿತು. ಇತರ ಆಡಳಿತ ವರ್ಗದವರೂ ಸಹ ಈ ಕಾರಣಗಳನ್ನು ವ್ಯವಸ್ಥಿತವಾಗಿ ಸ್ವಾರ್ಥಕ್ಕೆ ಬಳಸಿಕೊಂಡು ಕಾರ್ಮಿಕ ಸಂಘ ಎನ್ನುವುದನ್ನು ಬೆದರು ಬೊಂಬೆಯನ್ನಾಗಿ ಕಾರ್ಮಿಕರ ಮೇಲೆ ಇಂದಿಗೂ ಪ್ರಯೋಗಿಸುತ್ತಿದ್ದಾರೆ.

ಸ್ನೇಹಿತರೇ, ಗಮನಿಸಬೇಕಾದ ವಿಷಯವೆಂದರೆ ಕಾರ್ಮಿಕ ಸಂಘ ಗಳನ್ನು ರಚಿಸಿಕೊಂಡ ಎಲ್ಲ ಕಾರ್ಖಾನೆಗಳೂ ಮುಚ್ಚಿಲ್ಲ. ಕಾರ್ಮಿಕ ಸಂಘಗಳು ಹಾಗೂ ಆಡಳಿತ ವರ್ಗದ ನಡುವೆ ಉತ್ತಮ ಸಂಬಂಧವಿರುವ ಹಲವು ಕಾರ್ಖಾನೆಗಳು ಇಂದಿಗೂ ಯಶಸ್ವಿಯಾಗಿ ಕಾರ್ಯ ನಿರ್ವಹಿಸು ತ್ತಿವೆ. ಅಂತಹ ಒಂದು ಕಾರ್ಖಾನೆ ಯನ್ನು ಹೆಸರಿಸಲು ಬಹಳ ಸಂತೋಷ ವೆನಿಸುತ್ತದೆ.



ಬನ್ನೇರುಘಟ್ಟ ರಸ್ತೆಯಲ್ಲಿ ಹಲವಾರು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿರುವ ಇಂಗ್ಲಿಷ್ ಅಪಾರೆಲ್ಸ್ ಎಂಬ ಕಾರ್ಖಾನೆಯ ಕಾರ್ಮಿಕರು, ಕಾರ್ಮಿಕ ಸಂಘವನ್ನು ರಚಿಸಿಕೊಂಡಿದ್ದು, ಕಾರ್ಖಾನೆಯು ಯಾವುದೇ ಸಮಸ್ಯೆಯಿಲ್ಲದೇ ಉತ್ತಮವಾಗಿ ಕೆಲಸ ನಿರ್ವಹಿಸುತ್ತಿದೆ. ಸಂಘವು ಆಡಳಿತ ವರ್ಗದೊಂದಿಗೆ ಮೂರು ವರ್ಷಗಳಿಗೊಂದರಂತೆ, ಈಗ ಮೂರನೇ ಅವಧಿಯ ಒಪ್ಪಂದ ಮಾಡಿಕೊಂಡಿದೆ. (2005, 2006, 2007). ಈ ಒಪ್ಪಂದ, ಕಾರ್ಮಿಕರಿಗೆ ಹಲವಾರು ಸವಲತ್ತುಗಳು ಒದಗಿಸಿಕೊಟ್ಟಿದ್ದು, ಅದರಲ್ಲಿ ಕೆಲವು ಮುಖ್ಯಾಂಶಗಳನ್ನು ತಿಳಿದುಕೊಳ್ಳೋಣ.

- ಕಾರ್ಮಿಕರಿಗೆ ದರ್ಜೆಗಳಿಗನುಗುಣವಾಗಿ ಪ್ರತಿ ವರ್ಷವೂ ಸರ್ಕಾರ ನಿಗದಿ ಪಡಿಸುವ ಡಿ.ಎ ಜೊತೆಗೆ ರೂ. 136ಗಳಿಂದ 250ರಷ್ಟು (6% ರಿಂದ 8%) ವೇತನದಲ್ಲಿ ಬಡ್ತಿ ದೊರೆಯಬೇಕೆಂದು ಒಪ್ಪಂದ ವಾಗಿದೆ.
- ದಿನಕ್ಕೆ ಎರಡು ಬಾರಿ ಕಾಫಿ/ಟೀಗೆ ಹತ್ತು ನಿಮಿಷಗಳ ಸಮಯಾವಕಾಶ ವನ್ನು ಒದಗಿಸಲಾಗಿದೆ.
- ಕಾರ್ಮಿಕರಿಗೆ ಮನೆ ಬಾಡಿಗೆ ಭತ್ಯೆಯಾಗಿ ತಿಂಗಳಿಗೆ 405/– ರೂ.ಗಳನ್ನು ಒದಗಿಸಲಾಗಿದೆ.
- ಕಾರ್ಮಿಕರಿಗೆ ಗಳಿಕೆ ರಜೆಯನ್ನು ಹೊರತುಪಡಿಸಿ ವರ್ಷಕ್ಕೆ 5 ದಿನ ಸಾಂದರ್ಭಿಕ ರಜೆ (ಸಿ.ಎಲ್) ಒದಗಿಸಲಾಗಿದೆ.
- ಹಾಜರಾತಿ ಬೋನಸ್ ಅನ್ನು ರೂ. 75/– ಗಳಿಂದ ರೂ. 175/– ರವರೆಗೆ ಅವಕಾಶ ನೀಡಲಾಗಿದೆ
- ಬೋನಸ್ ಅನ್ನು ಒಪ್ಪಂದದ ಅವಧಿಯ ಮೂರು ವರ್ಷಗಳಲ್ಲಿ, ಮೊದಲನೆ ವರ್ಷ 17%, ಎರಡನೇ ವರ್ಷ 18%, ಮೂರನೇ ವರ್ಷ 19% ಕೊಡಬೇಕೆಂದು ಒಪ್ಪಂದವಾಗಿದೆ.
- ಎರಡು ವರ್ಷ ಪೂರ್ಣಗೊಳಿಸಿದ ಕಾರ್ಮಿಕರಿಗೆ ಬಡ್ಡಿ ರಹಿತ ಹಬ್ಬದ ಮುಂಗಡ, ಹಾಗೂ ಐದು ವರ್ಷ ಪೂರ್ಣಗೊಳಿಸಿದ ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸಕ್ಕೆ ರೂ. 5000/–ಗಳನ್ನು ಮುಂಗಡ ಕೊಡಬೇಕೆಂದು, ಮತ್ತು ಈ ಮುಂಗಡಗಳನ್ನು ಪ್ರತಿ ತಿಂಗಳ ವೇತನದಲ್ಲಿ 10 ಸಮಕಂತುಗಳಾಗಿ ಕಡಿತ ಮಾಡುವ ಅವಕಾಶ ಒದಗಿಸಲಾಗಿದೆ.
- ವರ್ಷಕ್ಕೊಮ್ಮೆ ಕಾರ್ಮಿಕರಿಗೆ ಆಯುಧಪೂಜೆ ಸಮಯದಲ್ಲಿ 300/– ರೂ.ಗಳ ಪ್ರವಾಸ ಭತ್ಯೆ ಒದಗಿಸ ಲಾಗಿದೆ.

ಮೇಲಿನ ಸೌಕರ್ಯಗಳನ್ನು ಒದಗಿಸಿಕೊಟ್ಟಿರುವ ಕಾರ್ಖಾನೆಯು, ಕಾರ್ಮಿಕರಿಗೆ ಕೆಲಸಕ್ಕೆ ಸಂಬಂಧ ಪಟ್ಟಂತೆ ಕೆಲವು ನಿಬಂಧನೆಗಳನ್ನು ವಿಧಿಸಿದ್ದು, ಅವುಗಳಲ್ಲಿ ಅತ್ಯಂತ ಮುಖ್ಯವಾಗಿರುವುದು ಪ್ರೊಡಕ್ಷನ್ ಟಾರ್ಗೆಟ್ ನಿಗದಿ. ಈ ನಿಗದಿಯು ಕಾರ್ಮಿಕರಿಗೆ ಹೊರೆಯಾಗದೇ, ಅವರು ಒತ್ತಡವಿಲ್ಲದೆ ಕೆಲಸ ಮಾಡಲು ಅನುಕೂಲವಾಗಿದೆ.

ಗಾರ್ಮೆಂಟ್ಸ್ ಉದ್ಯಮದ ಕಾರ್ಮಿಕರೆಲ್ಲರೂ ಗಮನಿಸಬೇಕಾದ ಸಂಗತಿಯೇನೆಂದರೆ, ಹಲವಾರು ವರ್ಷಗಳಿಂದ ಯಶಸ್ವಿಯಾಗಿ ಕಾರ್ಮಿಕ ಸಂಘವನ್ನು ನಡೆಸಿಕೊಂಡು ಬಂದಿರುವ ಈ ಕಾರ್ಖಾನೆಯ ಕಾರ್ಮಿಕರು ಬಹಳ ದೊಡ್ಡ ಸಾಧನೆಯನ್ನೇ ಮಾಡಿದ್ದಾರೆ. ಇತರ ಗಾರ್ಮೆಂಟ್ಸ್ ಕಾರ್ಮಿಕರೂ ಸಹ ಸಂಘಟಿತರಾಗಿ ಉತ್ತಮ ಸೌಲಭ್ಯಗಳನ್ನು ಹೊಂದಲು ಇದು ಪ್ರೇರಣೆಯಾಗಿದೆ.

ಕಾರ್ಮಿಕ ಸಂಘಗಳಿಂದ ಕಾರ್ಮಿಕರ ಕೆಲಸಕ್ಕೆ ಕುತ್ತು ಎಂಬ ಪೂರ್ವಾಗ್ರಹದಿಂದ ಹೊರಗೆ ಬಂದು, ಅದರಿಂದ ಆಗಿರುವ ಒಳ್ಳೆಯ ಪರಿಣಾಮಗಳನ್ನು ಗಮನದಲ್ಲಿಟ್ಟುಕೊಂಡು, ಕಾರ್ಮಿಕರೆಲ್ಲರೂ ಆ ನಿಟ್ಟಿನಲ್ಲಿ ಮುಂದುವರೆಯಬೇಕೆಂದು ಸೂಜಿದಾರ ಬಳಗ ಆಶಿಸುತ್ತದೆ.



Scanned with OKEN Scanner

# ಕಾರ್ಮಿಕ ಚಳವಳಿಯಲ್ಲಿ ಮಹಿಳಾ ನೇತಾರರು

**ಭಾ**ರತದಲ್ಲಿ ಬ್ರಿಟಿಷ್ ಚಳವಳಿಯ ಭಾಗವಾಗಿ 1920ರಲ್ಲಿ ಕಾರ್ಮಿಕ ಚಳವಳಿ ಯೂನಿಯನ್‌ಗಳು ಪ್ರಾರಂಭವಾದವು. ಕಾರ್ಮಿಕ ಹಾಗೂ ರೈತ ಸಮೂಹ ಈ ಚಳವಳಿಯಲ್ಲಿ ಭಾಗವಹಿಸಿದವು. ಹಲವಾರು ಬೂರ್ಜ್ವಾ ಹಾಗೂ ಪೆಟ್ಟಿ ಬೂರ್ಜ್ವಾ ನೇತಾರರು, ರಾಷ್ಟ್ರೀಯತಾ ಹೋರಾಟ ಕಾರ್ಯಕರ್ತರೂ, ಕಾರ್ಮಿಕ ಚಳವಳಿ ಜೊತೆ ಸಂಪರ್ಕವಿಟ್ಟುಕೊಂಡರು. ಕೆಲ ಮಾರ್ಕ್ಸ್‌ವಾದಿ ನೇತಾರರು, ಕಾರ್ಮಿಕ ಚಳವಳಿ ಸಂಘಟಕರೂ, ಬೆಂಬಲಿಗರೂ ಆದರು. ಇದೇ ಸನ್ನಿವೇಶದಲ್ಲಿ 1919ರಲ್ಲಿ ಎಐಟಿಯುಸಿಗೆ ಬುನಾದಿ ಹಾಕಿದ ಮೊದಲ ಸಮಾವೇಶದಲ್ಲಿ ಅನ್ನಿಬೆಸೆಂಟ್ ಅವರು ಉಪಾಧ್ಯಕ್ಷರಾದರು.

ಬಹಳಷ್ಟು ಮಧ್ಯಮವರ್ಗದ ವಿದ್ಯಾವಂತ ಮಹಿಳೆಯರು ಕಾರ್ಮಿಕರ ಸಂಘಟಕರಾಗಿ ಕೆಲಸ ಮಾಡಿ, ಕಾರ್ಮಿಕ ನೇತಾರರೆಂದು ಗುರುತಿಸಲ್ಪಟ್ಟರು. ಮುಂಬೈ ಪ್ರಾಂತ್ಯದಲ್ಲಿ ಎಂ.ಎನ್. ರಾಯ್ ಅವರ ಬೆಂಬಲಿಗರಾದ ಮಣಿಬೆನ್‌ಕಾರಾ ಅವರು ಗಿರಣಿ ಕಾರ್ಮಿಕರ ನೇತೃತ್ವ ವಹಿಸಿದ್ದರು. ಇವರು ಎಂತಹ ಉರಿಕಾರುವಂತಹ ಭಾಷಣಗಾರ್ತಿಯಾಗಿದ್ದರೆಂದರೆ ಇವರು ಮಾಡಿದ ಭಾಷಣಕ್ಕೆ ಇವರನ್ನು ಬಂಧಿಸಲಾಗಿತ್ತು. 1935ರಲ್ಲಿ ಎಐಟಿಯುಸಿ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟ ಇವರು, ಜೀವನ ಪರ್ಯಂತ ಕಾರ್ಮಿಕರ ನಡುವೆ ಕೆಲಸ ಮಾಡುತ್ತಿದ್ದರು. ಸಿಪಿಐ ನೇತಾರ ಎಮ್. ವಿ. ಡಾಂಗೆ ಅವರ ಪತ್ನಿ ಉಷಾ ಡಾಂಗೆಯವರು 1928ರ ಗಿರಣಿ ಮುಷ್ಕರದ ಕಾಲದಿಂದ ಮಹಿಳಾ ಕಾರ್ಮಿಕರ ನಡುವೆ ಸಕ್ರಿಯರಾಗಿದ್ದರು. ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡುವುದನ್ನು ವಿರೋಧಿಸಿ, ಬ್ರಿಟಿಷ್ ಮಿಲ್ ಕಾರ್ಮಿಕರನ್ನು ಸಂಘಟಿಸಿ, ಸತತ ಎಂಟು ತಿಂಗಳು ಮುಷ್ಕರ ನಡೆಸಿದರು. ಈ ಮುಷ್ಕರದಲ್ಲಿ ಪಾಲ್ಗೊಂಡಿದ್ದ ಸುಮಾರು 700 ಮಹಿಳಾ ಕಾರ್ಮಿಕರು ಮಿಲ್‌ನ ಕಾರ್ಯಾಲಯವನ್ನು ಹಗಲು ರಾತ್ರಿ ಮುತ್ತಿಗೆ ಹಾಕಿದ್ದು ಇದರ ವಿಶೇಷತೆ. ಇವರೂ ಕೂಡ 1934ರ ಕಾರ್ಮಿಕ ಮುಷ್ಕರದ ಸಂಘಟಕರಾಗಿದ್ದು, ಜೀವನವಿಡೀ ಕಾರ್ಮಿಕರ ಜೊತೆಗಿದ್ದು ಚಳವಳಿಯಲ್ಲಿ ಪಾಲ್ಗೊಂಡರು.




ಸಿಪಿಐ ಪಕ್ಷದ ಸದಸ್ಯರಾಗಿದ್ದ ಮೀನಾಕ್ಷಿ ಸಾನೆಯವರನ್ನು ಪಕ್ಷವು 1934ರಲ್ಲಿ ಪಕ್ಷದ ಮಿಲಿಟನ್ಸಿ ಎಂದೇ ಹೆಸರುವಾಸಿಯಾಗಿದ್ದ ಶೋಲಾಪುರದ ಕಾರ್ಮಿಕರ ಜೊತೆ ಕೆಲಸ ಮಾಡಲು ಕಳುಹಿಸಿತು. ಅಲ್ಲಿ ಇವರು ಗಿರಣಿ ಹಾಗೂ ಬೀಡಿ ಕಾರ್ಮಿಕರನ್ನು ಸಂಘಟಿಸಿ, ಚಳವಳಿ ಕಟ್ಟಿದ್ದರು. ಈ ಚಳವಳಿಯಲ್ಲಿ ಮಹಿಳಾ ಕಾರ್ಮಿಕರು ಮುಂಚೂಣಿಯಲ್ಲಿದ್ದರು. ಎಐಟಿಯುಸಿಯಲ್ಲಿ ಪೂರ್ಣಾವಧಿ ಕಾರ್ಯಕರ್ತರಾಗಿದ್ದ ಶಾಂತಾ ಭಾಲೇರಾವ್ ಎಂಬುವವರು ಎಐಟಿಯುಸಿಯ ಉಪಾಧ್ಯಕ್ಷರಾಗಿ ಚುನಾಯಿಸಲ್ಪಟ್ಟರು. ಇವರೂ ಸಹ ಕಾರ್ಮಿಕ ಚಳವಳಿ ಮತ್ತು ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಕೊಂಡರು.

1946ರ ಫೆಬ್ರವರಿಯಲ್ಲಿ ಭಾರತೀಯ ರಾಯಲ್ ನೇವಿಯು ದಂಗೆ ಎದ್ದಾಗ, ಅವರನ್ನು ಬೆಂಬಲಿಸಿ ಮಿಲಿಟೆಂಟ್ ಆಗಿ ಕಾರ್ಮಿಕರ ಜನರಲ್ ಮುಷ್ಕರ ನಡೆಯಿತು. ಈ ಮುಷ್ಕರದಲ್ಲಿ ಮುಂಬೈನ ಸುಮಾರು 500 ಕಾರ್ಮಿಕರು ಪೊಲೀಸ್ ಗೋಲಿಬಾರ್‌ನಲ್ಲಿ ಹತರಾದರು. ಕಮಲ್ ದಂಡೆ ಎಂಬ ಮಹಿಳಾ ಕಮ್ಯುನಿಸ್ಟ್ ನೇತಾರರೊಬ್ಬರು ಇವರೊಲ್ಲೊಬ್ಬರಾಗಿದ್ದರು.

ಹೀಗೆ ಸ್ವಾತಂತ್ರ್ಯಪೂರ್ವ ಹಾಗು ಸ್ವಾತಂತ್ರ್ಯಾನಂತರದ ದಿನಗಳಲ್ಲೂ ಬಂಡವಾಳಶಾಹಿಗಳ ವಿರುದ್ಧ ದಂಗೆ ಎದ್ದ ಕಾರ್ಮಿಕರ ಸಂಘಟನೆಗಳಲ್ಲಿ ಮಹಿಳಾ ಕಾರ್ಮಿಕರು ಮುಂಚೂಣಿಯಲ್ಲಿ ಗುರುತಿಸಿಕೊಂಡರು.

*(ಸ್ವಾತಂತ್ರ್ಯಾನಂತರದ ಮಹಿಳಾ ಕಾರ್ಮಿಕರ ಚಳವಳಿ ಕುರಿತು ಮುಂದಿನ ಸಂಚಿಕೆಯಲ್ಲಿ)*

ಮಾಣಿಕ್ಯ ದೀಪ್ತಿ

'ಚಳವಳಿ ಸತ್ತವರ ಕಥೆಯಲ್ಲ ; ಬದುಕಿರುವವರ ದಾರಿದೀಪ' —*ತ.ರಾ.ಸು.*



Scanned with OKEN Scanner

# ಸಂಘಟನೆಯ ಅದಮ್ಯ ಚೇತನ – ಭೈರವಿ ದೇಸಾಯಿ




1998ರ ಏಪ್ರಿಲ್ ತಿಂಗಳ ಒಂದು ದಿನ. ಅಮೆರಿಕಾದ ನ್ಯೂಯಾರ್ಕ್‌ನಲ್ಲಿ ಅಂದು ಒಂದೇ ಒಂದು ಟ್ಯಾಕ್ಸಿಯೂ ರಸ್ತೆಗಿಳಿಯಲಿಲ್ಲ. ಸುಮಾರು 40 ಸಾವಿರ ಟ್ಯಾಕ್ಸಿ ಚಾಲಕರು ಅಂದು ಸರ್ಕಾರ ತಮ್ಮ ವಿರುದ್ಧ ಜಾರಿಗೊಳಿಸಿರುವ ಕಾನೂನನ್ನು ವಿರೋಧಿಸಿ ಮುಷ್ಕರ ನಡೆಸಿದರು. ಇದರಿಂದ ಆ ಒಂದು ದಿನದ ಮಟ್ಟಿಗೆ ಸಾರ್ವಜನಿಕ ಜನಜೀವನ ಅಸ್ತವ್ಯಸ್ತಗೊಂಡಿತು. ಮುಷ್ಕರ ಯಶಸ್ವಿಯಾಯಿತು.

ಅಮೆರಿಕಾದ ನ್ಯೂಯಾರ್ಕ್‌ನಲ್ಲಿ ಟ್ಯಾಕ್ಸಿ ಚಾಲಕರನ್ನು ಸಂಘಟಿಸಿ ಅವರಿಗೆ ನ್ಯಾಯ ಒದಗಿಸಿಕೊಡಲು ಶ್ರಮಿಸಿದ ಭೈರವಿ ದೇಸಾಯಿ ಈ ಯಶಸ್ಸಿನ ರೂವಾರಿ. ಕೇವಲ 31ನೇ ವಯಸ್ಸಿನಲ್ಲಿ ಇಷ್ಟು ಅಗಾಧ ಮಟ್ಟದಲ್ಲಿ ಸಂಘಟನಾ ಕಾರ್ಯ ಸಾಧಿಸಿದ ಭೈರವಿಯವರು ಕೇವಲ ಯಶಸ್ವೀ ಸಂಘಟನಾಕಾರ್ತಿಯಲ್ಲ, ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುತ್ತಿರುವ ಧೀಮಂತ ಮಹಿಳೆಯಾಗಿದ್ದಾರೆ.



ನ್ಯೂಜರ್ಸಿಯ ಅಂಗಡಿಯೊಂದರಲ್ಲಿ ದುಡಿಯುತ್ತಿರುವ ಭೈರವಿ ದೇಸಾಯಿಯವರ ತಂದೆ ಹಾಗೂ ಕಾರ್ಖಾನೆಯೊಂದರಲ್ಲಿ ಕೆಲಸ ಮಾಡುತ್ತಿರುವ ತಾಯಿ ಭಾರತೀಯ ಸಂಜಾತರಾಗಿದ್ದಾರೆ. ರೂಟ್ಗರ್ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ಮುಗಿಸಿದ ಭೈರವಿ ನಾಲ್ಕು ವರ್ಷಗಳ ನಂತರ ಟ್ಯಾಕ್ಸಿ ಚಾಲಕರನ್ನು ಸಂಘಟಿಸುವ ಮೂಲಕ ಸಮಾಜ ಸೇವೆಗೆ ಇಳಿದರು.

ಸುಮಾರು 100 ದೇಶಗಳನ್ನು ಪ್ರತಿನಿಧಿಸುವ ನ್ಯೂಯಾರ್ಕ್‌ನ ನಗರದ ಟ್ಯಾಕ್ಸಿ ಚಾಲಕರು ಮುಖ್ಯವಾಗಿ ದಕ್ಷಿಣ ಏಷ್ಯಾ, ಆಫ್ರಿಕಾ, ಹಾಗೂ ಕೆರಿಬಿಯನ್ ದೇಶಗಳಿಂದ ವಲಸೆ ಬಂದವರಾಗಿದ್ದಾರೆ. ಟ್ಯಾಕ್ಸಿ ಚಾಲಕ ವೃತ್ತಿ ಮಾಡುತ್ತಿರುವ ಇವರು, ವೃತ್ತಿಯಲ್ಲಿ ಇತರ ಕಾರ್ಮಿಕರಿಗಿಂತ ಹೆಚ್ಚು ಅಪಾಯವನ್ನು ಎದುರಿಸುತ್ತಿದ್ದಾರೆ. ಬಿಡುವಿಲ್ಲದೆ ವಾರಕ್ಕೆ 60 ರಿಂದ 70 ಗಂಟೆಗಳ ಕಾಲ ಕೆಲಸ ಮಾಡುವುದರಿಂದ ಇವರ ಆರೋಗ್ಯ ಅತ್ಯಂತ ಅಪಾಯದಲ್ಲಿತ್ತು. ಇಷ್ಟು ಬಿಡುವಿಲ್ಲದೆ ಕೆಲಸ ಮಾಡಿದರೂ ಅವರಿಗೆ ದೊರೆಯುತ್ತಿದ್ದುದು, ಕನಿಷ್ಠ ವೇತನದ ಅರ್ಧದಷ್ಟು ಮಾತ್ರ. ಸಂಘಟನೆಯ ಪ್ರಾರಂಭದಲ್ಲಿ ಇವರ ದೇಶ ಭಾಷೆ, ಸಂಸ್ಕೃತಿ ಎಲ್ಲವೂ ಬೇರೆಯಾದ್ದರಿಂದ ಇವರನ್ನು ಸಂಘಟಿಸುವುದು ಅತ್ಯಂತ ಕಷ್ಟದ ಸವಾಲಾಗಿತ್ತು. ಆದರೂ ಅವರನ್ನು ಸಂಘಟಿಸುವ ಮೂಲಕ ಭೈರವಿ ಸಾಧನೆಯನ್ನು ಮೆರೆದು ನ್ಯೂಯಾರ್ಕ್ ಟ್ಯಾಕ್ಸಿ ವರ್ಕರ್ಸ್ ಅಲಿಯನ್ಸ್ (NYTWA) ಸಂಘವನ್ನು ರಚಿಸಿದರು. 1998ರ ಏಪ್ರಿಲ್‌ನಲ್ಲಿ ಟಿ.ಎಲ್. ಆಯೋಗವು ಚಾಲಕರ ಸಣ್ಣ ಪುಟ್ಟ ತಪ್ಪುಗಳಿಗೆ ಹೆಚ್ಚಿನ ದಂಡವನ್ನು ವಿಧಿಸುವ ಕಾನೂನನ್ನು ಜಾರಿಗೆ ತಂದಿತು. ಇದನ್ನು ವಿರೋಧಿಸಿ (NYTWA)ಯು ನ್ಯೂಯಾರ್ಕಿನಾದ್ಯಂತ ಟ್ಯಾಕ್ಸಿ ಚಾಲಕರ ಮುಷ್ಕರಕ್ಕೆ ಕರೆ ನೀಡಿತು. ಇದಕ್ಕೆ ಸ್ಪಂದಿಸಿ ನ್ಯೂಯಾರ್ಕ್‌ನ 40 ಸಾವಿರ ವಾಹನಗಳು ರಸ್ತೆಗಿಳಿಯಲಿಲ್ಲ. 30 ವರ್ಷಗಳ ನಂತರ ನ್ಯೂಯಾರ್ಕ್‌ನಲ್ಲಿ ಇದೊಂದು ಐತಿಹಾಸಿಕ ಘಟನೆಯಾಯಿತು.


ಟ್ಯಾಕ್ಸಿ ಚಾಲಕರ ಆರೋಗ್ಯದ ಅಗತ್ಯತೆ ಹಾಗೂ ಜಾರಿಯಲ್ಲಿದ್ದ ಆರೋಗ್ಯ ವ್ಯವಸ್ಥೆಗಳೊಂದಿಗಿನ ಅವರ ಅನುಭವಗಳ ಬಗ್ಗೆ 2002ರಲ್ಲಿ NYTWA ಸಂಸ್ಥೆಯು ಕೊಲಂಬಿಯಾ ವಿಶ್ವವಿದ್ಯಾಲಯದೊಂದಿಗೆ ಸಂಶೋಧನೆಯನ್ನು ನಡೆಸುವುದರೊಂದಿಗೆ, 2002ರಲ್ಲಿ 600 ಮಂದಿ ಚಾಲಕರಿಗೆ ಆರೋಗ್ಯ ತಪಾಸಣೆಯನ್ನೂ ಸಹ ನಡೆಸಿತು. ಸಂಶೋಧನೆಯ ಪರಿಣಾಮವಾಗಿ 2004ರಲ್ಲಿ ನ್ಯೂಯಾರ್ಕ್‌ನ ಮೇಯರ್‌ರವರೊಂದಿಗೆ ನಡೆದ ಸಂಧಾನ ಸಭೆಯಲ್ಲಿ ಚಾಲಕರಿಗೆ ಹೆಚ್ಚಿನ ಭತ್ಯೆಯನ್ನು ನೀಡಬೇಕೆಂದು ತೀರ್ಮಾನಿಸಲಾಯಿತು. ಪತ್ರಿಕಾ ವರದಿಯೊಂದರಂತೆ, ಸರ್ಕಾರದ ಸಂಸ್ಥೆಗಳಾದ ಟಿ.ಎಲ್. ಆಯೋಗ ಹಾಗೂ ವಿಮಾನ ನಿಲ್ದಾಣ ಪ್ರಾಧಿಕಾರಗಳು ಭೈರವಿ ದೇಸಾಯಿಯವರ ಕೆಲಸಕ್ಕೆ ಬೆಂಬಲವನ್ನು ನೀಡುವುದರೊಂದಿಗೆ ಅವರನ್ನು ಬಹಳ ಗೌರವಿಸುತ್ತವೆ. ಆಕೆ ಸಾಮಾಜಿಕ ಬದಲಾವಣೆಗೋಸ್ಕರ ಬದ್ಧಳಾಗಿರುವುದರಿಂದ ಹಾಗೂ ಹಿಡಿದ ಕೆಲಸವನ್ನು ಸಾಧಿಸುವ ಛಲಗಾತಿಯಾದುದರಿಂದ ಅವರೊಂದಿಗೆ ಕೆಲಸ ಮಾಡಲು ಜನರು ಉತ್ಸುಕರಾಗಿದ್ದಾರೆ.

ಪ್ರತಿಷ್ಠಿತ ಫೋರ್ಡ್ ಫೌಂಡೇಷನ್‌ನ "ಬದಲಾಗುತ್ತಿರುವ ವಿಶ್ವದ ನಾಯಕತ್ವ" ಪ್ರಶಸ್ತಿ ಭೈರವಿ ದೇಸಾಯಿಯವರನ್ನು ಅರಸಿಕೊಂಡು ಬಂದಿದೆ.

ಸೂಜಿ–ದಾರ ಬಳಗವು ಅವರಿಗೆ ಶುಭ ಹಾರೈಸುತ್ತದೆ. ❑



Scanned with OKEN Scanner




# ಓ.ಟಿ.ಯೋ?... ಓ.ಸಿ.ಯೋ?...

ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ದುಡಿಯುವ ಮಹಿಳೆಯರ ಬಹು ದೊಡ್ಡ ಸಮಸ್ಯೆ, ಅವರ ಕೆಲಸದ ಸಮಯದ ಅನಿಶ್ಚಿತತೆ. ನಿಗದಿತ ವೇಳೆಗೆ ಕೆಲಸಕ್ಕೆ ಹಾಜರಾಗುವ ಅವರಿಗೆ ಸಂಜೆ ಕೆಲಸ ಮುಗಿಸಿ ಹೊರಬರಲು ಒಂದು ನಿರ್ದಿಷ್ಟ ಸಮಯವಿಲ್ಲ. ಇದಕ್ಕೆ ಮುಖ್ಯ ಕಾರಣ ಓ.ಟಿ ಹಾಗೂ ಓ.ಸಿ. (ಯಾವುದೇ ಭತ್ಯೆಯಿಲ್ಲದೇ ದುಡಿಯುವ ಹೆಚ್ಚುವರಿ ಅವಧಿಗೆ ಓ.ಸಿ. ಎಂಬ ಹೆಸರು ಪ್ರಚಲಿತವಿದೆ.) ಕಾರ್ಮಿಕರು ಹೆಚ್ಚುವರಿ ಕೆಲಸ ಮಾಡಲು ಒಪ್ಪಲೀ ಬಿಡಲಿ, ಕಡ್ಡಾಯವಾಗಿ ಕೆಲಸ ಮಾಡಲೇ ಬೇಕಾದ ಪರಿಸ್ಥಿತಿ.

ಅಂತರರಾಷ್ಟ್ರೀಯ ಮಟ್ಟದಲ್ಲಿ ವ್ಯವಸ್ಥಿತವಾಗಿ ಕೆಲಸ ನಿರ್ವಹಿಸುತ್ತಿರುವ ಗಾರ್ಮೆಂಟ್ಸ್ ಉದ್ಯಮದಲ್ಲಿ, ಆಡಳಿತ ವರ್ಗದ ಸರಿಯಾದ ಮೇಲ್ವಿಚಾರಣೆ ಹಾಗೂ ಯೋಜನೆ(ಪ್ಲಾನಿಂಗ್)ಯ ಕೊರತೆಯಿಂದ, ಕಾರ್ಮಿಕರು ಪ್ರತಿನಿತ್ಯ ಒಂದಲ್ಲ ಒಂದು ಕಾರಣಕ್ಕಾಗಿ ಹೆಚ್ಚುವರಿ ಕೆಲಸ(ಓ.ಟಿ) ಮಾಡಲೇಬೇಕಾಗಿದೆ. ಸೆಕ್ಷನ್ 64ರ ಪ್ರಕಾರ ಮಾಲಿಕರು ತ್ರೈಮಾಸಿಕ ಅವಧಿಯಲ್ಲಿ 50 ಗಂಟೆಗಳಿಗಿಂತ ಹೆಚ್ಚು ಓ.ಟಿ. ಮಾಡಿಸುವ ಹಾಗಿಲ್ಲ. ಹಾಗೂ ಮಾಡಿದ ಹೆಚ್ಚುವರಿ ಕೆಲಸಕ್ಕೆ ವೇತನದ ಎರಡು ಪಟ್ಟು ನೀಡಬೇಕು. ಆದರೆ, ಕಾರ್ಮಿಕರು ತಿಂಗಳಿಗೆ 60–80 ಗಂಟೆಗಳ ಕಾಲ ಹೆಚ್ಚುವರಿ ಕೆಲಸ ಮಾಡುತ್ತಿದ್ದಾರೆ. ಕೆಲವು ಆಡಳಿತ ವರ್ಗದವರು ಈ ಕೆಲಸಕ್ಕೆ ವೇತನದ ಒಂದು ಪಟ್ಟು, ಮತ್ತು ಒಂದೂವರೆ ಪಟ್ಟಿನಷ್ಟು ಮಾತ್ರ ನೀಡಿ ಕಾನೂನನ್ನು ಉಲ್ಲಂಘಿಸುತ್ತಿದ್ದಾರೆ.

ಆಡಳಿತ ವರ್ಗದ ಹೆಚ್ಚಿನ ಲಾಭದ ಆಸೆಯಿಂದ, ಕಾರ್ಮಿಕರನ್ನು ಶೋಷಣೆಗೊಳಪಡಿಸುತ್ತಿರುವ ಮತ್ತೊಂದು ವ್ಯವಸ್ಥೆಯೆಂದರೆ ಓ.ಸಿ. ಪದ್ಧತಿ. ಕಾರ್ಮಿಕರಿಗೆ ಎಂಟು ಗಂಟೆಯ ಒಳಗಾಗಿ ಮುಗಿಸಲಾಗದಂತಹ ಪ್ರೊಡಕ್ಷನ್ ಟಾರ್ಗೆಟ್ ಅನ್ನು ನಿಗದಿ ಪಡಿಸುವುದರಿಂದ ಕಾರ್ಮಿಕರು ಸಂಜೆ ಎಷ್ಟೇ ಗಂಟೆಯಾದರೂ ಕೆಲಸ ಮಾಡಿ ಪೂರೈಸಬೇಕು. ಇದಕ್ಕೆ ಯಾವುದೇ ಭತ್ಯೆಯನ್ನು ಅವರಿಗೆ ನೀಡಲಾಗುವುದಿಲ್ಲ. ಅವೈಜ್ಞಾನಿಕವಾಗಿ ಕಾರ್ಮಿಕರ ಸಾಮರ್ಥ್ಯಕ್ಕೆ ಮೀರಿದ ಪ್ರೊಡಕ್ಷನ್ ಟಾರ್ಗೆಟ್ ನಿಗದಿ ಪಡಿಸಿ, ಕಾರ್ಮಿಕರಿಂದ ಹೆಚ್ಚು ಕೆಲಸ ತೆಗೆದಿಕೊಳ್ಳುವುದೇ ಈ ಪದ್ಧತಿಯ ಹಿಂದೆ ಅಡಗಿರುವ ಸತ್ಯ.

ಈ ರೀತಿ ಕಾರ್ಮಿಕರಿಂದ ಹೆಚ್ಚು ಕೆಲಸ ತೆಗೆದುಕೊಳ್ಳುವುದಕ್ಕೆ ಆಡಳಿತ ವರ್ಗ ಹಲವಾರು ಕಾರ್ಯತಂತ್ರಗಳನ್ನು ಅನುಸರಿಸುತ್ತಿದೆ. ಪೀಣ್ಯ ಪ್ರದೇಶದ ಒಂದು ಕಾರ್ಖಾನೆಯಲ್ಲಿ ಮಹಿಳಾ ಕಾರ್ಮಿಕರಿಗೆ ಬೆಳಿಗ್ಗೆ 7.00 ಗಂಟೆಯಿಂದ ಮಧ್ಯಾಹ್ನ 3.00 ಗಂಟೆಯ ವರೆಗೂ ಒಂದು ಶಿಫ್ಟ್ ಕಾರ್ಯನಿರ್ವಹಿಸುತ್ತಿದೆ. ಈ ಶಿಫ್ಟ್‌ಗಳಲ್ಲಿ ದುಡಿಯುವ ಕಾರ್ಮಿಕರನ್ನು ಹೆಚ್ಚುವರಿ ಕೆಲಸದ ನೆವ ಹೇಳಿ ಸಂಜೆ ಏಳರ ವರೆವಿಗೂ ದುಡಿಸಿಕೊಳ್ಳಲಾಗುತ್ತಿದೆ. ಇದಕ್ಕೆ ಅವರಿಗೆ ದೊರೆಯುವುದು ಗಂಟೆಗೆ ಅವರ ವೇತನದ ಒಂದುಪಟ್ಟು ಮಾತ್ರ. (ಸಿಂಗಲ್ ಓ.ಟಿ)

ಮಹಿಳಾ ಕಾರ್ಮಿಕರು ಪ್ರತಿದಿನ ಎಂಟರಿಂದ ಹತ್ತು ಗಂಟೆ ಬಿಡುವಿಲ್ಲದೆ ಕೆಲಸ ಮಾಡುವುದರಿಂದ, ತಮ್ಮ ಕೌಟುಂಬಿಕ ಹಾಗೂ ಸಾಮಾಜಿಕ ಚಟುವಟಿಕೆಗಳನ್ನು ವ್ಯವಸ್ಥಿತವಾಗಿ ಯೋಜಿಸಿಕೊಳ್ಳಲು ಆಗದೇ ಒತ್ತಡಕ್ಕೆ ಸಿಲುಕುತ್ತಿದ್ದಾರೆ. ಇದು ಅವರ ಆರೋಗ್ಯದ ಮೇಲೆ ಗಾಢ ದುಷ್ಪರಿಣಾಮಗಳನ್ನು ಉಂಟುಮಾಡುತ್ತಿರುವುದಲ್ಲದೇ, ಸಂಜೆ ತಡವಾಗಿ ಮನೆಗೆ ಹೋಗುವುದರಿಂದ ಕುಟುಂಬದ ಇತರ ಸದಸ್ಯರಿಂದ ಅವಮಾನ, ಅನುಮಾನಗಳನ್ನು ಎದುರಿಸುವಂತಾಗಿದೆ.

ಅವೈಜ್ಞಾನಿಕ ರೀತಿಯಲ್ಲಿ 8 ಗಂಟೆಯ ಅವಧಿಯೊಳಗೆ ಮಾಡಲಾಗದಂತಹ ಪ್ರೊಡಕ್ಷನ್ ನಿಗದಿ ಮಾಡುವುದು ಮತ್ತು ಮಾಡಿದ ಹೆಚ್ಚುವರಿ ಕೆಲಸಕ್ಕೆ ಕಾನೂನು ಪ್ರಕಾರವಾಗಿ ನೀಡಬೇಕಿರುವ ವೇತನವನ್ನೂ ನೀಡದಿರುವುದು ಸರಿಯಲ್ಲ. ಒಬ್ಬ ಕಾರ್ಮಿಕ ತನ್ನ ಗರಿಷ್ಠ ಸಾಮರ್ಥ್ಯ ಬಳಸಿಕೊಂಡು ಎಷ್ಟು ಉತ್ಪಾದನೆ ಮಾಡಬಹುದು ಎಂಬುದರ ಬಗ್ಗೆ ಸರ್ಕಾರ ಹಾಗೂ ವೃತ್ತಿಪರ ಸಂಸ್ಥೆಗಳು, ತಜ್ಞರಿಂದ ಸಂಶೋಧನೆ ನಡೆಸಿ ಕಾರ್ಮಿಕರಿಗೆ ನ್ಯಾಯ ಒದಗಿಸುವುದು ಅತ್ಯಗತ್ಯವಾಗಿದೆ. ❑

*ಸಂವೇದನೆ.....* *(1ನೇ ಪುಟದಿಂದ)*

ಈ ದೇಶಗಳಲ್ಲಿನ ಎಲ್ಲಾ ಗಾರ್ಮೆಂಟ್ಸ್ ಕಾರ್ಮಿಕರಿಗೆ ಒಂದೇ ರೀತಿಯ ಕನಿಷ್ಠ ವೇತನ ಜಾರಿಗೊಳಿಸಲು ಸರ್ಕಾರಗಳನ್ನು ಒತ್ತಾಯಿಸಲು ಕಾರ್ಮಿಕರ ಪರವಾಗಿ ಕೆಲಸ ಮಾಡುತ್ತಿರುವ ಹಲವಾರು ಸಂಘ ಸಂಸ್ಥೆಗಳು ಡಿಸೆಂಬರ್ 2 ಹಾಗೂ 3ರಂದು ಒಂದು ಆಂದೋಲನಾ ಸಭೆಯನ್ನು ಬೆಂಗಳೂರಿನಲ್ಲಿ ನಡೆಸುತ್ತಿವೆ. ಭಾರತ, ಶ್ರೀಲಂಕಾ, ಬಾಂಗ್ಲಾದೇಶ, ಪಾಕಿಸ್ತಾನ, ಚೀನಾ(ಹಾಂಗ್‌ಕಾಂಗ್) ಇಂಡೋನೇಷಿಯಾ, ಕಾಂಬೋಡಿಯಾ ಮತ್ತು ಥಾಯ್‌ಲ್ಯಾಂಡ್ ದೇಶದ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಈ ಸಭೆಯಲ್ಲಿ ಭಾಗವಹಿಸುತ್ತಿದ್ದಾರೆ.

ಈ ಆಂದೋಲನಾ ಸಭೆಯನ್ನು, ಜಾಬ್ ವಿಥ್ ಜಸ್ಟೀಸ್ (JWJ,USA) CEC(New Delhi), ಹಾಗೂ ಬೆಂಗಳೂರಿನ NTUI, ಫೆಡಿನಾ, ಸ್ತ್ರೀ ಜಾಗೃತಿ ಸಮಿತಿ, ಹಾಗೂ ಸಿವಿಡೆಪ್ – ಇಂಡಿಯಾ ಸಂಸ್ಥೆಗಳು ಸಂಘಟಿಸುತ್ತಿವೆ.

ಕಾರ್ಮಿಕರು ಸಂಘಟಿತರಾಗುವುದು ಅಸಾಧ್ಯವಲ್ಲ ಎಂಬುದಕ್ಕೆ, ಪ್ರಪಂಚದಾದ್ಯಂತ ವಿವಿಧ ದೇಶಗಳಿಂದ ಉದ್ಯೋಗಕ್ಕಾಗಿ ವಲಸೆ ಬಂದು, ಅಮೆರಿಕಾದ ನ್ಯೂಯಾರ್ಕ್‌ನಲ್ಲಿ ದುಡಿಯುತ್ತಿರುವ ಟ್ಯಾಕ್ಸಿ ಚಾಲಕರು, ಸಂಘಟಿತರಾಗಿರುವುದು ಉತ್ತಮ ಉದಾಹರಣೆ. ಈ ಕಾರ್ಮಿಕರು ವಿವಿಧ ಜನಾಂಗ, ಸಂಸ್ಕೃತಿ ಭಾಷೆಗಳಿಂದ ಬಂದಿದ್ದರೂ ಸಂಘಟಿತರಾಗಿ, ಉತ್ತಮ ಜೀವನ ನಿರ್ವಹಣಾ ವೇತನ ಹಾಗೂ ಕೆಲಸದ ವಾತಾವರಣವನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಹೀಗಿದ್ದಾಗ ದಕ್ಷಿಣ ಏಷ್ಯಾದ ಗಾರ್ಮೆಂಟ್ಸ್ ಕಾರ್ಮಿಕರು ಸಂಘಟಿತರಾಗಿ ಅವರ ಬೇಡಿಕೆಯನ್ನು ಈಡೇರಿಸಿಕೊಳ್ಳುವುದು ಅಸಾಧ್ಯವೇನಿಲ್ಲ. ಬೆಂಗಳೂರಿನ ಆಂದೋಲನಾ ಸಭೆಯು ಯಶಸ್ವಿಯಾಗಿ ನಡೆದು, ಈ ರಾಷ್ಟ್ರಗಳ ಗಾರ್ಮೆಂಟ್ಸ್ ಕಾರ್ಮಿಕರ ಜೀವನ ಮಟ್ಟ ಉತ್ತಮವಾಗಲೆಂದು ಸೂಜಿ–ದಾರ ಬಳಗ ಹಾರೈಸುತ್ತದೆ. ❑



Scanned with OKEN Scanner

# ಬೋನಸ್-ಪ್ರತಿಯೊಬ್ಬ ಕಾರ್ಮಿಕರ ಹಕ್ಕು

1917ರ ಮೊದಲನೇ ಮಹಾಯುದ್ಧದ ಸಂದರ್ಭದಲ್ಲಿ ಕೆಲವು ಟೆಕ್ಸ್‌ಟೈಲ್ಸ್ ಮಿಲ್‌ಗಳ ಮಾಲೀಕರು, ಕಾರ್ಮಿಕರಿಗೆ ಅವರ ವೇತನದ ಶೇ. 10 ಭಾಗದಷ್ಟು ಯುದ್ಧದ ಭತ್ಯೆಯಾಗಿ ಕೊಡುತ್ತಿದ್ದುದರೊಂದಿಗೆ, ಭಾರತದಲ್ಲಿ ಬೋನಸ್ ಎಂಬ ಪದ್ಧತಿ ಪರಿಚಯವಾಯಿತು. 1960ರ ಮಾರ್ಚ್/ಏಪ್ರಿಲ್‌ನಲ್ಲಿ ನವದೆಹಲಿಯಲ್ಲಿ ನಡೆದ ಸ್ಟ್ಯಾಂಡಿಂಗ್ ಲೇಬರ್ ಕಮಿಟಿಯ 18ನೇ ಅಧಿವೇಶನದ ಎರಡು ಹಾಗೂ ಮೂರನೇ ಸಭೆಯಲ್ಲಿ ಬೋನಸ್‌ನ ಬಗ್ಗೆ ಪ್ರಸ್ತಾಪಿಸಲಾಯಿತು. ಕಾರ್ಖಾನೆಗಳಲ್ಲಿ ದುಡಿಯುವ ಕಾರ್ಮಿಕರಿಗೆ, ಲಾಭಾಂಶದ ಒಂದು ಮೊತ್ತವನ್ನು ಬೋನಸ್ ರೀತಿ ಕೊಡಬೇಕೆಂದು; ಆ ಸಮಯದಲ್ಲಿ ರಚನೆಯಾದ ಸಮಿತಿಯು ಭಾರತ ಸರ್ಕಾರಕ್ಕೆ ಶಿಫಾರಸ್ಸು ಮಾಡಿತು. ಕೆಲವು ಬದಲಾವಣೆಗಳೊಂದಿಗೆ ಸರ್ಕಾರವು ಈ ಶಿಫಾರಸ್ಸನ್ನು ಒಪ್ಪಿ 1965ರ ಮೇ 29ರಂದು ಅಂಗೀಕರಿಸಿ ಜಾರಿಗೆ ತಂದಿದೆ.

- ಈ ಕಾಯಿದೆಯಂತೆ ಪ್ರತಿಯೊಂದು ಕಾರ್ಖಾನೆಯು ತನ್ನ ಎಲ್ಲಾ ಕಾರ್ಮಿಕರಿಗೂ ಶೇ. 8.33ರಷ್ಟು ಬೋನಸ್ ಅನ್ನು ಕಡ್ಡಾಯವಾಗಿ ಕೊಡಲೇಬೇಕು. (ಒಂದು ತಿಂಗಳ ವೇತನದಷ್ಟು)
- 20ಕ್ಕಿಂತ ಹೆಚ್ಚು ಕಾರ್ಮಿಕರಿರುವ ಕಾರ್ಖಾನೆಗಳಲ್ಲಿ ಬೋನಸ್ ಕಾಯಿದೆಯನ್ನು ಕಡ್ಡಾಯವಾಗಿ ಜಾರಿಗೆ ತರಬೇಕು.
- ಪ್ರತಿ ವರ್ಷ ಏಪ್ರಿಲ್ ತಿಂಗಳ ಮೊದಲ ದಿನದಿಂದ ಮುಂದಿನ ಮಾರ್ಚ್ ತಿಂಗಳ ಕಡೆಯವರೆಗೂ ಕಾರ್ಮಿಕರು ಪಡೆದ ಒಟ್ಟು ವೇತನದ ಆಧಾರದ ಮೇಲೆ ಬೋನಸ್ ಅನ್ನು ಲೆಕ್ಕ ಹಾಕಲಾಗುತ್ತದೆ.

## ಅರಿವು



- ಏಪ್ರಿಲ್ ಒಂದರಿಂದ 8 ತಿಂಗಳ ಅವಧಿಯೊಳಗಾಗಿ, ಅಂದರೆ ನವೆಂಬರ್‌ನ ಒಳಗಾಗಿ ಹಿಂದಿನ ವರ್ಷದ ಬೋನಸ್ ಅನ್ನು ಆಡಳಿತ ವರ್ಗದವರು ಕಡ್ಡಾಯವಾಗಿ ನೀಡಲೇಬೇಕು.
- ಆರು ತಿಂಗಳು ಕೆಲಸ ಮಾಡಿ ಬಿಟ್ಟ ಕಾರ್ಮಿಕರೂ ಬೋನಸ್ ಪಡೆಯಲು ಅರ್ಹರಾಗಿರುತ್ತಾರೆ.
- ಕೆಲಸ ಬಿಟ್ಟ ಕಾರ್ಮಿಕರಿಗೆ ಬೋನಸ್ ನೀಡದಿದ್ದಲ್ಲಿ, ಅವರು ಕಾರ್ಮಿಕ ಇಲಾಖೆಗೆ ಅಥವಾ ಕಾರ್ಮಿಕ ನ್ಯಾಯಾಲಯಕ್ಕೆ ಒಂದು ವರ್ಷದ ಒಳಗಾಗಿ ದೂರು ನೀಡಬೇಕು.
- ಪ್ರೊಬೇಷನರಿ, ದಿನಗೂಲಿ ಹಾಗೂ ಅರೆ ಕಾಲಿಕ ಕಾರ್ಮಿಕರೂ ಸಹ ಬೋನಸ್ ಪಡೆಯಲು ಅರ್ಹರಾಗಿರುತ್ತಾರೆ.
- ಕಾರ್ಖಾನೆಯು ತಾತ್ಕಾಲಿಕವಾಗಿ ಮುಚ್ಚಿದ ಅವಧಿ, ಕಾರ್ಮಿಕರು ಅಪಘಾತದಿಂದ ಪಡೆದ ರಜೆಯ ಅವಧಿ, ಹಾಗೂ ಹೆರಿಗೆ ರಜೆಯ ಅವಧಿಗೆ ವೇತನ ಪಡೆಯದಿದ್ದರೂ ಬೋನಸ್ ಪಡೆಯಲು ಅರ್ಹರಾಗಿರುತ್ತಾರೆ.
- ಬೋನಸ್ ಕಾಯಿದೆನ್ನು ಉಲ್ಲಂಘಿಸಿದ ಆಡಳಿತ ವರ್ಗಕ್ಕೆ ಸೆಕ್ಷನ್ 28ರ ಪ್ರಕಾರ ನ್ಯಾಯಾಲಯವು ಆರು ತಿಂಗಳ ಕಾಲ ಕಾರಾಗೃಹ ಶಿಕ್ಷೆಯನ್ನು ವಿಧಿಸಬಹುದು.
- ಹೊಸ ಉದ್ಯಮಗಳಿಗೆ ಸೆಕ್ಷನ್ 16ರ ಪ್ರಕಾರ ಬೋನಸ್ ಕಾಯಿದೆಯಿಂದ ವಿನಾಯತಿ ಇದೆ. ❑

## ನಿಮ್ಮ ಮಾತು

ಸೂಜಿ-ದಾರ ಚೆನ್ನಾಗಿ ಮೂಡಿಬಂದಿದೆ. ಗಾರ್ಮೆಂಟ್ಸ್ ಕಾರ್ಮಿಕರು ಸಂಘಟಿತರಾಗಿ ಪತ್ರಿಕೆ ಹೊರತಂದಿರುವುದು ಸಂತೋಷದ ವಿಷಯ. ಇನ್ನೂ ಉತ್ತಮವಾಗಿ ಮೂಡಿಬರಲೆಂದು ಹಾರೈಸುತ್ತೇವೆ.

*– ಮಾಂಗೋಗೋವ್ ಕಾರ್ಮಿಕರು, ಮಾಕಳಿ, ತುಮಕೂರು ರಸ್ತೆ*

ಸೂಜಿ-ದಾರ ಪತ್ರಿಕೆ ಚೆನ್ನಾಗಿದೆ. "ಅರಿವು" ಅಂಕಣದಲ್ಲಿ ಈ ಸಂಚಿಕೆಯಲ್ಲಿ ಪಿ.ಎಫ್. ಬಗ್ಗೆ ಬರೆದಿದ್ದೀರಿ. ಇ.ಎಸ್.ಐ., ಬೋನಸ್, ಕಾರ್ಮಿಕ ಕಾನೂನುಗಳ ಬಗ್ಗೆಯೂ ತಿಳಿಸಿಕೊಡಿ.

*– ಸುನಂದ, ಮೈಸೂರು ರಸ್ತೆ, ಬೆಂಗಳೂರು*

ಸೂಜಿ-ದಾರ ಪತ್ರಿಕೆಯಲ್ಲಿ ವಿವಿಧ ರಂಗದಲ್ಲಿ ಸಾಧನೆ ಮಾಡಿರುವ ಮಹಿಳೆಯರ ಬಗ್ಗೆ ತಿಳಿಸಿಕೊಟ್ಟದ್ದಕ್ಕಾಗಿ ಧನ್ಯವಾದಗಳು.

*– ಜಯಶ್ರೀ, ಮೈಸೂರು ರಸ್ತೆ, ಬೆಂಗಳೂರು*

'ಆರೋಗ್ಯ ಭಾಗ್ಯ' ಅಂಕಣ ಉಪಯುಕ್ತವಾಗಿದೆ.

*– ಲಲಿತ, ಜಾಯ್ಸ್ ಅಪಾರಲ್ಸ್, ಮೈಸೂರು ರಸ್ತೆ, ಬೆಂಗಳೂರು*



Scanned with OKEN Scanner

# ಆತ್ಮವಿಶ್ವಾಸವೊಂದೇ ಆಯುಧ

*ಕಲಾ*

ನನ್ನ ಊರು ಮಡಿಕೇರಿಯ ಕುಶಾಲನಗರ. ತಂದೆ ಪೋಸ್ಟ್ ಮಾಸ್ತರರಾಗಿದ್ದರು. ನಾವು ಐದು ಜನ ಹೆಣ್ಣು ಮಕ್ಕಳು, ಇಬ್ಬರು ಗಂಡು ಮಕ್ಕಳು, ತೀರಾ ಶ್ರೀಮಂತರೂ ಅಲ್ಲದ, ಬಡವರು ಅಲ್ಲದ ಮಧ್ಯಮವರ್ಗದ ಕುಟುಂಬ ನಮ್ಮದು.

ನನ್ನನ್ನು ಶಿವಮೊಗ್ಗಕ್ಕೆ ಕೊಟ್ಟು ಮದುವೆ ಮಾಡಿದರು. ನನ್ನ ಗಂಡ ಪ್ರಾವಿಜನ್ ಸ್ಟೋರ್ ಇಟ್ಟುಕೊಂಡಿದ್ದರು. ಮೂರು ಸ್ವಂತ ಮನೆ ಇತ್ತು. ಸಾಮಾನ್ಯವಾಗಿ ಎಲ್ಲಾ ಹಳ್ಳಿ ಹೆಣ್ಣು ಮಕ್ಕಳು ಬಯಸುವಂತೆ ನಾನು ಗೃಹಿಣಿಯಾಗಿ ಗಂಡ ಮಕ್ಕಳ ಆರೈಕೆಯಲ್ಲಿ ಸಂತೋಷ ಕಾಣುತ್ತಿದ್ದೆ.

ನನ್ನ ಸಂತೋಷವನ್ನು ಕಂಡು ವಿಧಿ ಸಹಿಸಲಿಲ್ಲ. 3 ವರ್ಷಗಳ ಕಾಲ ಸಂತೋಷವಾಗಿ ದಾಂಪತ್ಯ ಜೀವನ ನಡೆಸುತ್ತಿದ್ದ ನನ್ನನ್ನು ಎರಡು ಮಕ್ಕಳ ತಾಯಿಯಾಗಿಸಿ ನನ್ನ ಪತಿ ವಿಧಿವಶ ರಾದರು.

ಅಂದಿನಿಂದ ಶುರುವಾಯ್ತು ನನ್ನ ಕಷ್ಟದ ಬದುಕು. ಸಮಾಜ ನನ್ನನ್ನು ನೋಡುವ ದೃಷ್ಟಿಯೇ ಬದಲಾಯಿತು. ಈ ದೃಷ್ಟಿಯಿಂದ ತಪ್ಪಿಸಿಕೊಂಡು ಈಗ್ಗೆ 2 ವರ್ಷಗಳ ಹಿಂದೆ ಬೆಂಗಳೂರಿಗೆ ಬಂದೆ. ಎರಡು ಮಕ್ಕಳನ್ನು ಕಟ್ಟಿಕೊಂಡು ಅಲೆಯುತ್ತಿದ್ದವಳಿಗೆ ಅಕ್ಕನ ಆಸರೆ ದೊರೆಯಿತು.

ಜೀವನೋಪಾಯಕ್ಕಾಗಿ ಗಾರ್ಮೆಂಟ್ಸ್ ಕಾರ್ಖಾನೆಗೆ ಸೇರಿದೆ. ಅಲ್ಲಿಗೆ ಸೇರುವ ಮುಂಚೆ ಅಗಾಧವಾದ ಕಲ್ಪನೆಯಿತ್ತು. ಆ ನಂತರ ಅಲ್ಲಿನ ಜನ ಸ್ಥಿತಿಯ ಅರಿವಾಯಿತು. ಹೆಚ್ಚು ಪ್ರೊಡಕ್ಷನ್ ಪಡೆಯುವ ಆಸೆಯಿಂದ pm ಹಾಗೂ ಸೂಪರ್‌ವೈಸರ್‌ಗಳು ನಮ್ಮನ್ನು ಗಾಣದೆತ್ತಿನಂತೆ ದುಡಿಸುತ್ತಾರೆ. O.T ಎಂದು O.C ಎಂದು ಮಾಡಿಸಿಕೊಳ್ಳುತ್ತಾರೆ. ಆದರೂ ಈ ಎಲ್ಲಾ ಕೆಲಸದ ಹೊರೆ ಸಹಿಸಿಕೊಂಡು ನಿಷ್ಠೆಯಿಂದ ಕೆಲಸ ಮಾಡುತ್ತಿದ್ದರೆ, ನನ್ನ ಜೀವನದ ಹಿನ್ನಲೆ ತಿಳಿದ ಹುಂಬ ಸೂಪರ್‌ವೈಸರ್ ಒಬ್ಬ ಪ್ರತೀದಿನ ಮನೆತನಕ ಹಿಂಬಲಿಸತೊಡಗಿದ. ಆತನ ಮಾತುಗಳಂತೆ ನಡೆದರೆ, ನನ್ನನ್ನು ಕಾರ್ಖಾನೆ ಯಲ್ಲಿ ತುಂಬಾ ಚೆನ್ನಾಗಿ ನಡೆಸಿಕೊಳ್ಳುವುದಾಗಿ ಹೇಳಿದ.

ಗಂಡನಿಲ್ಲದೆಯೇ ಸ್ವತಂತ್ರ್ಯವಾಗಿ ಜೀವನ ನಡೆಸುವ ಹೆಣ್ಣುಮಕ್ಕಳೆಲ್ಲರೂ ಸುಲಭವಾಗಿ ಪರಪುರುಷನಿಗೆ ಒಲಿಯುತ್ತಾರೆ ಎಂಬ ಕಲ್ಪನೆ ಯಿಂದ ಹೀಗೆ ನನ್ನನ್ನು ಹಗಲಿರುಳೂ ಮಾನಸಿಕ ವಾಗಿ ಹಿಂಸಿಸಿದ ಸೂಪರ್‌ವೈಸರ್‌ನಿಂದಾಗಿ ನನಗೆ ಕೆಲಸಕ್ಕೆ ಹೋಗಲು ಭಯವಾಗ ತೊಡಗಿತು. ಈ ಚಿಂತೆಯಿಂದ ನನ್ನ ಮಾನಸಿಕ ಆರೋಗ್ಯ ಹದಗೆಟ್ಟಿತ್ತು. ಮಕ್ಕಳ ವಿದ್ಯಾಭ್ಯಾಸ ದೆಡೆಗೆ ನನ್ನ ಗಮನ ಕಡಿಮೆಯಾಯ್ತು.

ಅಷ್ಟರಲ್ಲಾಗಲೇ ನನಗೆ ಗಾರ್ಮೆಂಟ್ಸ್‌ನಲ್ಲಿ ದುಡಿಯುವ ಹೆಣ್ಣು ಮಕ್ಕಳ ಸಂಘಟನೆ "ಮುನ್ನಡೆ"ಯ ಪರಿಚಯವಾಯ್ತು.




ನನ್ನಂತೆಯೇ ನೂರಾರು ನೋವುಗಳನ್ನು ನುಂಗಿ, ತಮ್ಮ ಮೇಲಾಗುವ ದೌರ್ಜನ್ಯವನ್ನು ಛಲದಿಂದ ಎದುರಿಸಿ ಸಂಘಟಿತರಾಗುತ್ತಿರುವ ಅವರನ್ನು ಕಂಡು, ಅವರ ಒಡನಾಟದಲ್ಲಿ ನನ್ನನ್ನು ಗುರುತಿಸಿಕೊಂಡೆ.

ಈಗ ಎಲ್ಲಾ ಶೋಷಣೆಗಳನ್ನು ಆತ್ಮವಿಶ್ವಾಸ ದಿಂದ ಎದುರಿಸುತ್ತಾ ಬಂದಿದ್ದೇನೆ. ಸೂಪರ್ ವೈಸರ್‌ನ ಕಿರುಕುಳದಿಂದ ಪಾರಾಗಿದ್ದೇನೆ. ಸಂಘಟನೆಯ ಶಕ್ತಿಯಿಂದ ಸಬಲರಾಗುವುದು ಸಾಧ್ಯ. ಈಗ ನಾನು ಒಂಟಿಯಲ್ಲ...... □

## ಆರೋಗ್ಯ ಭಾಗ್ಯ

ಸ್ನೇಹಿತರೇ,

ನಿಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಸಹಾಯಕವಾಗಬಹುದಾದ ಕೆಲವು ಮನೆಮದ್ದುಗಳು.

- ಬಾಳೆಹಣ್ಣನ್ನು ಜೇನುತುಪ್ಪ ಮತ್ತು ಸಕ್ಕರೆಯೊಂದಿಗೆ ಸೇವಿಸಿದರೆ ಕೆಮ್ಮು ಮತ್ತು ಎದೆ ನೋವು ನಿವಾರಣೆಯಾಗುತ್ತದೆ.
- ನೇರಳೆ ಹಣ್ಣಿನ ಶರಬತ್ತು ಮತ್ತು ಜೇನುತುಪ್ಪ ಬೆರೆಸಿ ಸೇವಿಸಿದರೆ ಅಂಗೈ ಅಂಗಾಲು ಉರಿ ಉಪಶಮನವಾಗುತ್ತದೆ.
- ಕಾಲಿನ ನರಗಳು ಸೆಳೆಯುತ್ತಿದ್ದರೆ ನುಗ್ಗೆಮರದ ಚಕ್ಕೆಯನ್ನು ಒಂದಿಷ್ಟು ಜೀರಿಗೆ ಸೇರಿಸಿ ಅರೆದು ಬಿಸಿ ಮಾಡಿ ಲೇಪಿಸಬೇಕು.
- ಮುಟ್ಟಿನ ಸಮಯದಲ್ಲಿ 3–4 ಕಾಳು ಬೆಳ್ಳುಳ್ಳಿಯನ್ನು ಒಂದು ಲೋಟ ನೀರಿನಲ್ಲಿ ಬೇಯಿಸಿ ದಿನಕ್ಕೆ 3–4 ಬಾರಿ ಸೇವಿಸುವುದರಿಂದ ಮುಟ್ಟಿನ ಕಾಲದಲ್ಲಿ ಬರುವ ನೋವು ಉಪಶಮನವಾಗುತ್ತದೆ.
- ಲವಂಗವನ್ನು ಪುಡಿಮಾಡಿ ಅದಕ್ಕೆ ಸಮಪ್ರಮಾಣದಲ್ಲಿ ಸಕ್ಕರೆ ಬೆರೆಸಿ, ಸ್ವಲ್ಪ ಜೇನುತುಪ್ಪ ಕಲೆಸಿ ನೆಕ್ಕುವುದರಿಂದ ಮಕ್ಕಳ ಕೆಮ್ಮು ಮತ್ತು ಕಫ ಕಟ್ಟುವುದು ನಿಲ್ಲುತ್ತದೆ.
- ಮಕ್ಕಳಿಗೆ ನೆಗಡಿ, ಕೆಮ್ಮು, ಮೂಗು ಕಟ್ಟುವಿಕೆ ಹಾಗೂ ಎದೆಯಲ್ಲಿ ಕಫ ಕಟ್ಟಿದರೆ 4–5 ಬೆಳ್ಳುಳ್ಳಿ ಎಸಳುಗಳನ್ನು ಎಣ್ಣೆಯಲ್ಲಿ ಕೆಂಪಾಗುವಂತೆ ಕಾಯಿಸಿ ತಣಿಸಿ ಶೀಸೆಯಲ್ಲಿಟ್ಟುಕೊಂಡು ಆ ಎಣ್ಣೆಯನ್ನು ತಲೆಗೆ, ಹಣೆಗೆ, ಮೂಗಿಗೆ, ಕುತ್ತಿಗೆಗೆ, ಎದೆಗೆ, ಬೆನ್ನಿಗೆ ಹಚ್ಚಿಕೊಳ್ಳಬೇಕು.

*(ಸಂಗ್ರಹ)*

## ಕಾಮನಬಿಲ್ಲು

# ಶುಭಾಶಯಗಳು



→
ಯತಿನ್ ಗೌಡ
ಹುಟ್ಟಿದ ದಿನಾಂಕ: 18-10-2004
ತಾಯಿ : ನಳಿನಿ
ಕಾರ್ಖಾನೆ : ಟೆಕ್ಸ್‌ಪೋರ್ಟ್ ಕ್ರಿಯೇಷನ್ಸ್




←
ಸ್ವಾತಿ
ಹುಟ್ಟಿದ ದಿನಾಂಕ: 28-10-1998
ತಾಯಿ : ಲಲಿತಾ
ಕಾರ್ಖಾನೆ : ಇಸಿಸಿ-III



→
ದರ್ಶನ್ ಎಸ್.
ಹುಟ್ಟಿದ ದಿನಾಂಕ: 24-10-1993
ತಾಯಿ : ಕಲಾ ಶ್ರೀನಿವಾಸ್
ಕಾರ್ಖಾನೆ : ಎಚ್.ಪಿ.ಎಫ್.



←
ಎಂ.ಆರ್. ಲಕ್ಷ್ಮಣ
ಹುಟ್ಟಿದ ದಿನಾಂಕ: 19-11-
ತಾಯಿ : ರುಕ್ಮಿಣಿ ವಿ.ಪಿ.
ಕಾರ್ಖಾನೆ : ಟೆಕ್ಸ್‌ಪೋರ್ಟ್ ಕ್ರಿಯೇಷನ್



→
ಮಂಜುನಾಥ್ ಎಸ್.
ಹುಟ್ಟಿದ ದಿನಾಂಕ: 10-11-1990
ತಾಯಿ : ಶಾಂತಲಕ್ಷ್ಮಿ
ಕಾರ್ಖಾನೆ : ನಮಸ್ತೆ ಎಕ್ಸ್‌ಪೋರ್ಟ್ಸ್



ನಮಸ್ತೆ ಎಕ್ಸ್‌ಪೋರ್ಟ್ ಕಾರ್ಖಾನೆಯ ಕಾರ್ಮಿಕರಾದ
ಶ್ರೀಮತಿ ಕಮಲಾವತಿ ಹಾಗೂ ಶ್ರೀ ಅನಂತಕೃಷ್ಣರವರ ಇಪ್ಪತ್ತನೇ ವರ್ಷದ ವಿವಾಹ
ವಾರ್ಷಿಕೋತ್ಸವದ ಈ ಶುಭಸಂದರ್ಭದಲ್ಲಿ ಸೂಜಿ-ದಾರ ಬಳಗ ಶುಭ ಹಾರೈಸುತ್ತದೆ.

*ಸ್ನೇಹಿತರೇ,*

ಸೂಜಿ-ದಾರ ಬಳಗವು ಇನ್ನು ಮುಂದೆ ನಿಮ್ಮ ನೋವು ನಲಿವಿಗೆ ಸ್ಪಂದಿಸಲಿದೆ. ನಿಮ್ಮ ಬದುಕಿನ ಬವಣೆಗಳನ್ನು "ಬದುಕು-ಬವಣೆ" ಅಂಕಣಕ್ಕೂ, ಹಾಗೂ ನಿಮ್ಮ ಬದುಕಿನ ಸಂತಸದ ಘಳಿಗೆಯನ್ನು "ಕಾಮನಬಿಲ್ಲು" ಅಂಕಣಕ್ಕೂ ಫೋಟೋ ಹಾಗೂ ಮಾಹಿತಿಯೊಂದಿಗೆ ಪತ್ರಿಕೆಯ ವಿಳಾಸಕ್ಕೆ ಬರೆದು ಕಳಿಸಿ (ಉದಾ: ಮಕ್ಕಳ ಹುಟ್ಟುಹಬ್ಬ, ಮದುವೆ, ಪರೀಕ್ಷೆ ಫಲಿತಾಂಶ). ಸೂಜಿ-ದಾರ ಅದನ್ನು ಪ್ರಕಟಿಸಲು ಹರ್ಷಿಸುತ್ತದೆ.

*-ಸಂಪಾದಕರು.*

# ನೆರವು

ಪ್ರತಿ ಶನಿವಾರ ಹಾಗೂ ಭಾನುವಾರಗಳಂದು, ಗಾರ್ಮೆಂಟ್ಸ್ ಕಾರ್ಮಿಕರು ಯಾವುದೇ ಕಾರ್ಮಿಕ ವಿವಾದಕ್ಕಾಗಿ, ತಮ್ಮ ಮೇಲಿನ ದೌರ್ಜನ್ಯ, ಕೌಟುಂಬಿಕ ಸಲಹೆಗಾಗಿ ತಜ್ಞ ವಕೀಲರನ್ನು ಈ ಕೆಳಕಂಡ ಸಂಸ್ಥೆಯಲ್ಲಿ ಉಚಿತವಾಗಿ ಸಂಪರ್ಕಿಸಬಹುದು

ಸಿವಿಡೆಪ್ ಇಂಡಿಯಾ
ನಂ.8/3, ಶ್ರೀಮಾತಾ ನಿಲಯ
ನ್ಯೂಟಿಂಬರ್‌ಯಾರ್ಡ್ ಲೇಔಟ್
ಮೈಸೂರು ರಸ್ತೆ, ಬೆಂಗಳೂರು-29
ದೂ.: 26751320,

ಶನಿವಾರ ಸಂಜೆ 5-30ರ ನಂತರ ಹಾಗೂ ಭಾನುವಾರ ಬೆಳಿಗ್ಗೆ 10-30ರ ನಂತರ

ಮಹಿಳಾ ಕಾರ್ಮಿಕರಿಗೆ ಸಹಾಯ ಮಾಡುವ ಇನ್ನಿತರೆ ಸಂಸ್ಥೆಗಳು

1. **ಕರ್ನಾಟಕ ಮಹಿಳಾ ಆಯೋಗ**
   ನಂ. 105, ಮೊದಲನೇ ಮಹಡಿ,
   ಕರ್ನಾಟಕ ಗೃಹ ಮಂಡಳಿ ಕಟ್ಟಡ,
   ಕಾವೇರಿಭವನ, ಕೆ.ಜಿ.ರಸ್ತೆ ಬೆಂಗಳೂರು-560009
   ದೂ.: 22216485
2. **ವನಿತಾ ಸಹಾಯವಾಣಿ**
   ಪೊಲೀಸ್ ಕಮಿಷನರ್, ಕಛೇರಿ ಆವರಣ,
   ಇನ್‌ಫೆಂಟರಿ ರಸ್ತೆ, ಬೆಂಗಳೂರು
   ಉಚಿತ ದೂರವಾಣಿ: 1091
   ದೂ.: 22943225
3. **ವಿಮೋಚನಾ**
   ನಂ, 33/1-9, ತ್ಯಾಗರಾಜ ಬಡಾವಣೆ
   ಜೈಭಾರತನಗರ, ಮಾರುತಿ ಸೇವಾನಗರ
   ಬೆಂಗಳೂರು-38
   ದೂ.: 25492781 / 25492782
4. **ಹ್ಯೂಮನ್ ರೈಟ್ ಲಾ ನೆಟ್‌ವರ್ಕ್**
   ನಂ.51, 2ನೇ ಮಹಡಿ, ಇನ್‌ಫೆಂಟ್ರಿರಸ್ತೆ
   ಮೆಡಿನೋವ ಆಸ್ಪತ್ರೆ ಬಳಿ
   ಶಿವಾಜಿನಗರ, ಬೆಂಗಳೂರು-560 001
   ದೂ.: 25762477
5. **ಪರ್ಯಾಯ ಕಾನೂನು ವೇದಿಕೆ (ALF)**
   ನಂ.4, 3ನೇ ಅಡ್ಡರಸ್ತೆ
   8ನೇ ಮುಖ್ಯರಸ್ತೆ,
   ವಸಂತನಗರ, ಬೆಂಗಳೂರು-560052
   ದೂ.: 22356845
6. **ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರ**
   ಅರಮನೆ ರಸ್ತೆ, ಬೆಂಗಳೂರು
   ದೂ.: 22268073 / 22203068

ಸಂಪಾದಕ ಮಂಡಳಿ :. ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ, ನಂ, 8/3, ಶ್ರೀಮಾತಾ ನಿಲಯ, ಎನ್.ಟಿ.ವೈ ಲೇಔಟ್, ಮೈಸೂರು ರಸ್ತೆ, ಬೆಂ-560026. ದೂ. : 2675 1320
ಪ್ರಕಾಶಕರು : ಸಿವಿಡೆಪ್-ಇಂಡಿಯಾ. ಮುದ್ರಣ : ಇಳಾ ಪ್ರಿಂಟರ್ಸ್, ಬೆಂಗಳೂರು - 560 026. ದೂ. : 30615773 / 26757159